KAKL500033712024

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಕೆ.ಜಿ.ಎಫ್.**

**ಉಪಸ್ಥಿತರು : ಕೆ.ಎ. ನಾಗೇಶ** ಬಿ.ಎ.ಎಲ್, ಎಲ್‌ಎಲ್.ಬಿ.
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೆ.ಜಿ.ಎಫ್.

**ಅಪರಾಧಿಕ ಪ್ರಕರಣ ಸಂಖ್ಯೆ: 2169/2024**

**ದಿನಾಂಕ : 24 ನೇ ಜುಲೈ 2026**

**ಫಿರ್ಯಾದಿದಾರರು :** ರಾಜ್ಯದ ಪರವಾಗಿ ಬೇತಮಂಗಲ ಪೊಲೀಸರು
(**ಪ್ರತಿನಿಧಿಸುವವರು** : **ಸಹಾಯಕ ಸರ್ಕಾರಿ ಅಭಿಯೋಜಕರು**)

**ವಿರುದ್ಧ**

**ಆರೋಪಿಗಳು:**

1. ಅಮರೇಶ ಬಿನ್ ಶ್ರೀರಾಮಪ್ಪ,
   23 ವರ್ಷ, ವಾಸಃ ತಂಪರ್ಲಹಳ್ಳಿ ಗ್ರಾಮ,
   ಬೇತಮಂಗಲ ಹೋಬಳಿ, ಕೆಜಿಎಫ್ ತಾಲ್ಲೂಕು.

2. ನಾರಾಯಣಸ್ವಾಮಿ ಬಿನ್ ಶ್ರೀರಾಮಪ್ಪ,
   29 ವರ್ಷ, ವಾಸಃ ತಂಪರ್ಲಹಳ್ಳಿ ಗ್ರಾಮ,
   ಬೇತಮಂಗಲ ಹೋಬಳಿ, ಕೆಜಿಎಫ್ ತಾಲ್ಲೂಕು.

3. ನೇತ್ರ ಕೋಂ ರಮೇಶ,
   34 ವರ್ಷ, ವಾಸಃ ಮಂಗಪುರ ಗ್ರಾಮ,
   ಮಾಲೂರು ಅಂಚೆ,
   ಮಾಲೂರು ತಾಲ್ಲೂಕು.

4. ರಮೇಶ ಬಿನ್ ಲೇಟ್ ತಿಮ್ಮಪ್ಪ,
   37 ವರ್ಷ, ವಾಸಃ ಮಂಗಪುರ ಗ್ರಾಮ,
   ಮಾಲೂರು ಅಂಚೆ,
   ಮಾಲೂರು ತಾಲ್ಲೂಕು.

5. ಸುಶೀಲಮ್ಮ ಕೋಂ ಶ್ರೀರಾಮಪ್ಪ,
   49 ವರ್ಷ, ವಾಸಃ ತಂಪರ್ಲಹಳ್ಳಿ ಗ್ರಾಮ,
   ಬೇತಮಂಗಲ ಹೋಬಳಿ, ಕೆಜಿಎಫ್ ತಾಲ್ಲೂಕು.

**(ಅ–1 ರಿಂದ ಆ 4 ಪರ ಶ್ರೀ ಎಂ. ಪ್ರಕಾಶ್, ವಕೀಲರು)**

**( ಅ–5 ಪರ ಶ್ರೀ ಕೆ.ಸಿ.ನಾಗರಾಜ್, ವಕೀಲರು)**

1. ಘಟನೆ ಸಂಭವಿಸಿದ ದಿನಾಂಕ – 01-05-2024
2. ಘಟನೆ ವರದಿಯಾದ ದಿನಾಂಕ – 01-05-2024
3. ಫಿರ್ಯಾದಿದಾರರ ಹೆಸರು – ತಿಮ್ಮಪ್ಪ
4. ಆರೋಪಿತರನ್ನು ದಸ್ತಗಿರಿ ಮಾಡಿದ ದಿನಾಂಕ –
5. ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ – 03-07-2026
6. ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ – 03-07-2026
7. ಆರೋಪಿಸಲಾದ ಅಪರಾಧಗಳು – ಭಾ.ದಂ.ಸಂ. ಕಲಂಃ 143, 323 ಮತ್ತು 324 ಸಹವಾಚಕ ಕಲಂ 149
8. ನ್ಯಾಯಾಧೀಶರ ಅಭಿಪ್ರಾಯ – ಕೊನೆಯ ಆದೇಶದಂತೆ.

**ತೀರ್ಪು**

ಬೇತಮಂಗಲ ಪೊಲೀಸರು ಆರೋಪಿಗಳು ತಮ್ಮ ಠಾಣಾ ಮೊಕದ್ದಮೆ ಸಂಖ್ಯೆ:64/2024 ರಲ್ಲಿ ಭಾ.ದಂ.ಸಂ. ಕಲಂಃ 143, 323 ಮತ್ತು 324 ಸಹವಾಚಕ ಕಲಂ 149 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಮಾಡಿದ್ದಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಣೆ**

ದಿನಾಂಕಃ 01.05.2024 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಆರೋಪಿತರು ಸಂಸಾರದ ವಿಚಾರವಾಗಿ ಅಕ್ರಮ ಕೂಟ ಕಟ್ಟಿಕೊಂಡು ದೋ.ಸಾ.1 ರವರ ಮೇಲೆ ಜಗಳ ತೆಗೆದು ಕೈಗಳಿಂದ ಮತ್ತು ಕಾಲುಗಳಿಂದ ಹೊಡೆದು ಊತಗಾಯ ಮಾಡಿದ್ದು 1ನೇ ಆರೋಪಿಯು ದೊಣ್ಣೆಯಿಂದ ದೋ.ಸಾ.1ರವರ ಬೆನ್ನು, ಬಲಭುಜ ಹಾಗೂ ಕೈಗಳ ಮೇಲೆ ಹೊಡೆದು ರಕ್ತ ಗಾಯಪಡಿಸಿ ಸಮಾನ್ಯ ಸ್ವರೂಪದ ಮತ್ತು ತೀವ್ರ ಸ್ವರೂಪದ ಗಾಯಗಳನ್ನುಂಟು ಮಾಡಿದ್ದಾರೆಂದು ತನಿಖೆಯ ಮೂಲಕ ಸಾಬೀತಾಗಿರುವುದಾಗಿ ಬೇತಮಂಗಲ ಪೋಲೀಸರು ಆರೋಪಿತರ ವಿರುದ್ಧ ದೋಷಾರೋಪಣೆಯ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಆರೋಪಿತರು ವಕೀಲರ ಮುಖಾಂತರ ಜಾಮೀನು ಅರ್ಜಿಯನ್ನು ಸಲ್ಲಿಸಿ ಈ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾರ್ಯ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯು ಭಾ.ದಂ.ಸಂ. ಕಲಂಃ

143, 323 ಮತ್ತು 324 ಸಹವಾಚಕ ಕಲಂ 149 ರಂತೆ ಸಂಜ್ಞೇಯತೆಯನ್ನು ತೆಗೆದುಕೊಂಡಿದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಂತೆ ಆರೋಪಿತರಿಗೆ ದೋಷಾರೋಪಣಾ ಪಟ್ಟಿಯ ನಕಲನ್ನು ಜಾರಿಗೊಳಿಸಿದೆ. ದೋಷರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಲಾಯಿತು. ಆದರೆ ಆರೋಪಿತರು ದೋಷರೋಪಣೆ ರಚಿಸುವ ಪೂರ್ವದಲ್ಲಿಯೇ ವಿಮೋಚನೆ ಮಾಡಲು ಯಾವುದೇ ಸಕಾರಣಗಳು ಈ ನ್ಯಾಯಾಲಯಕ್ಕೆ ಕಂಡುಬರದ ಕಾರಣ ದೋಷರೋಪಣೆಯನ್ನು ರಚಿಸಲಾಯಿತು.

5. ಆರೋಪಿತರ ವಿರುದ್ಧ ಭಾ.ದಂ.ಸಂ. ಕಲಂಃ 143, 323 ಮತ್ತು 324 ಸಹವಾಚಕ ಕಲಂ 149 ರ ಅರೋಪಗಳಿಗೆ ದೋಷರೋಪಣೆಯನ್ನು ರಚಿಸಿ, ಓದಿ, ಆರೋಪಿತರಿಗೆ ತಿಳಿಯುವ ಬಾಷೆಯಲ್ಲಿ ವಿವರಿಸಿ ಹೇಳಿದ್ದು ಆರೋಪಿತರು ತಾವು ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

6. ಅಭಿಯೋಜನೆಯು ಆರೋಪಿತರ ವಿರುದ್ಧ ಆರೋಪಗಳನ್ನು ಸಂದೇಹಾತೀತವಾಗಿ ರುಜುವಾತು ಪಡಿಸಲು ತಮ್ಮ ಪರವಾಗಿ ಫ್ರಾಸಾ-1 ಎಂದು ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿ, ನಿಪಿ-1 ದಾಖಲೆಯನ್ನು ಗುರುತಿಸಿಕೊಂಡಿದ್ದಾರೆ. ಅಭಿಯೋಜನೆಯ ಪ್ರಕರಣದ ಪಿರ್ಯಾದಿದಾರರು ಸಾಕ್ಷಿದಾರರಾದ ಫ್ರಾಸಾ-1 ರವರು ಸಾಕ್ಷ್ಯದಲ್ಲಿ ಅಭಿಯೋಜನೆಯ ಪ್ರಕರಣದ ವಿರುದ್ದವಾಗಿ ಸಾಕ್ಷ್ಯ ನೀಡಿದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯವಾಗುವುದಿಲ್ಲವೆಂದು ಕಂಡು ಬಂದ

ಕಾರಣ ನ್ಯಾಯಾಲಯವು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಬೇಕೆಂಬ ಮನವಿಯನ್ನು ತಿರಸ್ಕರಿಸಿರುತ್ತದೆ.

7. ಅಭಿಯೋಜನೆಯ ಪ್ರಮುಖ ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯವನ್ನು ನೀಡಿದಿರುವುದರಿಂದ ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರನ್ನು ಪ್ರಶ್ನಿಸಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ.

8. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

9. ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಿರುವ ಆರೋಪಗಳ ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

## ಅಂಶಗಳು

**ಅಂಶ ಸಂಖ್ಯೆ–1** ದಿನಾಂಕಃ 01.05.2024 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಆರೋಪಿತರು ಸಂಸಾರದ ವಿಚಾರವಾಗಿ ಅಕ್ರಮ ಕೂಟ ಕಟ್ಟಿಕೊಂಡು ದೋ.ಸಾ.1 ರವರ ಮೇಲೆ ಜಗಳ ತೆಗೆದು ಭಾದಂಸಂ ವಿಧಿ 143 ಸಹವಾಚಕ ವಿಧಿ 149 ರಡಿಯಲ್ಲಿ ಕೃತ್ಯ ಎಸಗಿದ್ದಾರೆಂದು ನಿಸ್ಸಂಶಯವಾಗಿ ರುಜುವಾತು ಪಡಿಸುವವರೇ?

**ಅಂಶ ಸಂಖ್ಯೆ:-2** ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶವನ್ನು ಹೊಂದಿ ದೋ.ಸಾ.1 ರವರ ಮೇಲೆ ಕೈಗಳಿಂದ ಮತ್ತು ಕಾಲುಗಳಿಂದ ಹೊಡೆದು ಊತಗಾಯ ಮಾಡಿದ್ದು ಎಲ್ಲಾ ಆರೋಪಿಗಳು ಚಾಸಾ-1 ರವರ ಕಣ್ಣಿಗೆ ಯಾವುದೋ ವಸ್ತುವನ್ನು ಹಾಕಿ ಭಾ.ದಂ.ಸಂ.ಕಲಂಃ323 ಸಹವಾಚಕ ಕಲಂಃ149 ರಡಿಯಲ್ಲಿ ಕೃತ್ಯ ಎಸಗಿದ್ದಾರೆಂದು ನಿಸ್ಸಂಶಯವಾಗಿ ರುಜುವಾತು ಪಡಿಸುವವರೇ?

**ಅಂಶ ಸಂಖ್ಯೆ:-3** ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶವನ್ನು ಹೊಂದಿ 1 ನೇ ಆರೋಪಿತನು ದೊಣ್ಣೆಯಿಂದ ದೋ.ಸಾ.1 ರವರ ಬೆನ್ನು, ಬಲಭುಜ ಹಾಗೂ ಕೈಗಳ ಮೇಲೆ ಹೊಡೆದು ರಕ್ತ ಗಾಯ ಮಾಡಿದ್ದು ಭಾ.ದಂ.ಸಂ.ಕಲಂಃ324 ಸಹವಾಚಕ ಕಲಂಃ149 ರಡಿಯಲ್ಲಿ ಆರೋಪಿತರು ಕೃತ್ಯ ಎಸಗಿದ್ದಾರೆಂದು ನಿಸ್ಸಂಶಯವಾಗಿ ರುಜುವಾತು ಪಡಿಸುವವರೇ?

**ಅಂಶ ಸಂಖ್ಯೆ:-4-** ಏನು ಆದೇಶ?

10. ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ನ್ಯಾಯಾಲಯವು ಉತ್ತರಿಸಿದೆ.

| | |
|---|---|
| ಅಂಶ ಸಂಖ್ಯೆ ಃ 1 | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ ಃ 2 | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ ಃ 3 | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ ಃ 4 | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ, |

## ಕಾರಣಗಳು

11. **ಅಂಶ ಸಂಖ್ಯೆ 1 ರಿಂದ 3** ಃ- ಈ ಮೇಲ್ಕಂಡ 1 ರಿಂದ 3 ನೇ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಒಂದು ಅಂಶದ ಮೇಲಿನ ಚರ್ಚೆಯು ಮತ್ತೆ ಇನ್ನೊಂದು ಅಂಶಗಳಲ್ಲಿನ ಚರ್ಚೆಯಲ್ಲಿ ಪೂನರಾವರ್ತೆಯಾಗುವ ಕಾರಣಕ್ಕಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

12. ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಮಾಡಲಾದ ಆಪಾದನೆಗಳನ್ನು ರುಜುವಾತುಪಡಿಸುವ ಸಂಪೂರ್ಣ ಹೊಣೆಗಾರಿಕೆಯು ಅಭಿಯೋಜನೆಯವರ ಮೇಲಿದ್ದು ಅದಕ್ಕಾಗಿ ಅಭಿಯೋಜನೆಯವರು ಸಾಕಷ್ಟು ನಂಬಲಾರ್ಹವಾದ ಸಾಕ್ಷ್ಯ ಪುರಾವೆಗಳನ್ನು ಪೂರೈಸುವ ಹೊಣೆಗಾರಿಕೆಯು ಹಾಗೂ ಆರೋಪಿತರ ಆರೋಪಗಳನ್ನು ನಿಸ್ಸಂಶಯವಾಗಿ ರುಜುವಾತು ಪಡಿಸುವ ಹೊಣೆಗಾರಿಕೆಯು ಅಭಿಯೋಜನೆಯವರ ಮೇಲೆ ಇರುತ್ತದೆ.

13. ಅಭಿಯೋಜನೆಯ ಪ್ರಕಾರ ದಿನಾಂಕಃ 01.05.2024 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಆರೋಪಿತರು ಸಂಸಾರದ ವಿಚಾರವಾಗಿ ಅಕ್ರಮ ಕೂಟ ಕಟ್ಟಿಕೊಂಡು ದೋ.ಸಾ.1 ರವರ ಮೇಲೆ ಜಗಳ ತೆಗೆದು ಕೈಗಳಿಂದ ಮತ್ತು ಕಾಲುಗಳಿಂದ ಹೊಡೆದು ಊತಗಾಯ ಮಾಡಿದ್ದು 1 ನೇ ಆರೋಪಿಯು ದೊಣ್ಣೆಯಿಂದ ದೋ.ಸಾ.1 ರವರ ಬೆನ್ನು, ಬಲಭುಜ ಹಾಗೂ ಕೈಗಳ ಮೇಲೆ ಹೊಡೆದು ರಕ್ತ ಗಾಯಪಡಿಸಿ ಸಮಾನ್ಯ ಸ್ವರೂಪದ ಮತ್ತು ತೀವ್ರ ಸ್ವರೂಪದ

ಗಾಯಗಳನ್ನುಂಟು ಮಾಡಿ ಭಾ.ದಂ.ಸಂ. ಕಲಂಃ 143, 323 ಮತ್ತು 324 ಸಹವಾಚಕ ಕಲಂ 149 ರಂತೆ ಕೃತ್ಯ ಎಸಗಿದ್ದಾರೆಂದು ಅಂತಿಮ ವರದಿ ಸಲ್ಲಿಸಲಾಗಿದೆ.

14. ಈ ಪ್ರಕರಣದಲ್ಲಿ ಅಭಿಯೋಜನೆಯವರು ಹಾಜರುಪಡಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷಿಗಳನ್ನು ಸಂಕ್ಷಿಪ್ತವಾಗಿ ಪರಿಶೀಲಿಸಿದಾಗ ಅಭಿಯೋಜನೆಯ ಪಿರ್ಯಾದಿ ಸಾಕ್ಷಿದಾರರಾದ ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ತನ್ನ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿಲ್ಲ, ತನ್ನ ಮೇಲೆ ಹಲ್ಲೆ ಮಾಡಿಲ್ಲ ಮತ್ತು ನಿಪಿ-1ರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲವೆಂದು ಅಭಿಯೋಜನೆಯ ಪ್ರಕರಣದ ವಿರುದ್ಧವಾಗಿ ಸಾಕ್ಷ್ಯವನ್ನು ನುಡಿದಿದ್ದು ಸದರಿ ಸಾಕ್ಷಿದಾರರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸಾವಾಲು ಮಾಡಿದಾಗಲೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯವಾಗುವಂತಹ ಯಾವುದೇ ಸಾಕ್ಷವನ್ನು ನುಡಿದಿರುವುದಿಲ್ಲ.

15. ಈ ಪ್ರಕರಣದ ಪಿರ್ಯಾದಿ ಸಾಕ್ಷಿದಾರರು ತಮ್ಮ ಸಾಕ್ಷದಲ್ಲಿ ಅಭಿಯೋಜನೆಯ ಪ್ರಕರಣದ ವಿರುದ್ಧವಾಗಿ ಸಾಕ್ಷ ನೀಡಿದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯವಾಗುವುದಿಲ್ಲವೆಂದು ಕಂಡುಬಂದ ಕಾರಣ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಬೇಕೆಂಬ ಮನವಿಯನ್ನು ತಿರಸ್ಕರಿಸಿರುತ್ತದೆ. ಈ ಪ್ರಕರಣದ ಪಿರ್ಯಾದಿ ಸಾಕ್ಷಿದಾರರು ತನ್ನ ಸಾಕ್ಷ ದಲ್ಲಿ ಅಭಿಯೋಜನೆಯ ಪ್ರಕರಣದ ವಿರುದ್ಧವಾಗಿ ಸಾಕ್ಷ ನೀಡಿದ ಕಾರಣಗಳಿಂದ

ಆರೋಪಿತರು ಮೇಲ್ಕಂಡ ಅಪಾದನೆಯನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ನಂಬಲಾರ್ಹವಾದ ಹಾಗೂ ಕಾನೂನು ಬದ್ದವಾದ ಸಾಕ್ಷ್ಯಾಧಾರಗಳಿಂದ ರುಜುವಾತುಪಡಿಸಲಾಗದ ಕಾರಣ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ ಅಂಶ ಸಂಖ್ಯೆ 1 ರಿಂದ 3 ನ್ನು ಈ ನ್ಯಾಯಾಲಯವು ನಕಾರಾತ್ಮಕವಾಗಿ ಉತ್ತರಿಸುತ್ತದೆ.

16. **ಅಂಶ ಸಂಖ್ಯೆಃ 4-** ಮೇಲ್ಕಂಡಂತೆ ಚರ್ಚಿಸಿ ಅಂಶ 1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಿರುವುದರಿಂದ ಈ ಕೆಳಕಂಡ ಆದೇಶವನ್ನು ಈ ನ್ಯಾಯಾಲಯವು ಮಾಡುತ್ತಿದೆ.

## ಆದೇಶ

ದಂ.ಪ್ರ.ಸಂ. ಕಲಂಃ248(1) ರನ್ವಯ ಆರೋಪಿತರನ್ನು ಭಾ.ದಂ.ಸಂ. ಕಲಂಃ 143, 323 ಮತ್ತು 324 ಸಹವಾಚಕ ಕಲಂ 149 ರಡಿಯಲ್ಲಿ ದಂಡಿಸಬಹುದಾದ ಅಪರಾಧಗಳಿಂದ ನಿರ್ದೋಷಿಗಳೆಂದು ತಿರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಿದೆ ಮತ್ತು 5 ನೇ ಆರೋಪಿತನು ಜಾಮೀನು ಭದ್ರತೆಗಾಗಿ ಪಾವತಿಸಿರುವ ರೂ.5,000/-ಗಳನ್ನು ಆತನಿಗೆ ಹಿಂತಿರುಗಿಸತಕ್ಕದ್ದು.

ಪಿ.ಎಫ್. ನಂಃ 69 ಎ/2023 ದಿನಾಂಕಃ 02.05.2024 ರಡಿಯಲ್ಲಿ ಅಮಾನತ್ತುಪಡಿಸಿ

ಕೊಂಡಿರುವ ಮರದ ದೊಣ್ಣೆಯನ್ನು ಅಫೀಲು ಅವಧಿ ಮುಗಿದ ನಂತರ ನಾಶಪಡಿಸ ತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಹೇಳಿ, ಅವರಿಂದ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿಸಿ, ನನ್ನಿಂದ ತಿದ್ದುಪಡಿ ಮಾಡಿ ಇಂದು ದಿನಾಂಕಃ 24 ನೇ ಜುಲೈ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

Sd/-
**(ಕೆ.ಎ. ನಾಗೇಶ)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಕೆ.ಜಿ.ಎಫ್.**

**ಪರಿಚ್ಛೇದ**

1. ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ.

ಪ್ರಾ.ಸಾ.1 – ರಾಮಪ್ಪ

2. ಅಭಿಯೋಜನೆಯ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ

ನಿ.ಪಿ.1 – ದೂರು

3. ಆರೋಪಿಯ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ – ಇಲ್ಲ

4. ಆರೋಪಿಯ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ – ಇಲ್ಲ.

Sd/-
**(ಕೆ.ಎ. ನಾಗೇಶ)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಕೆ.ಜಿ.ಎಫ್.**